04 ಓ.ಎಸ್.98/2020
ಡಿ.ಡಬ್ಲ್ಯು 05

ದಿನಾಂಕ: 09-08-2024 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ವಕೀಲರಾದ ಶ್ರೀ. ಎಮ್.ಕೆ. ರವರಿಂದಃ-**

ನಾವು 7 ಜನ ಅಣ್ಣ ತಮ್ಮಂದಿರು. ಮಿಂಚೇರಿ ಗ್ರಾಮದಲ್ಲಿ ವಾಸ ಇದ್ದೇವೆ ಎಂದರೆ ಸರಿ. ನನ್ನ ಅಣ್ಣ ಬಸವರಾಜ ಬೆಂಗಳೂರಿನಲ್ಲಿ ಇರುತ್ತಾನೆ ಎಂದರೆ ಸರಿ. ನಾನು ಈಗ 8 ದಿನದ ಹಿಂದೆ ಬೆಂಗಳೂರಿಗೆ ಹೋಗಿದ್ದೆ. ದಾವೆಯನ್ನು ಹುಸೇನ್ ಸಾಬ್ ಕೆಂಚಪ್ಪನ ಮೇಲೆ ಹಾಕಿದ್ದಾನೆ. ಯಾವ ಕಾರಣಕ್ಕೆ ಈ ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಕೆಂಚಪ್ಪನ ಹೊಲವನ್ನು ಹುಸೇನ ಸಾಬ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದಾನೆ ಅದಕ್ಕೆ ದಾವೆ ಹಾಕಿದ್ದಾನೆ. ಕೆಂಚಪ್ಪನ ಹೆಸರಿಗೆ ದಾವಾ ಆಸ್ತಿಯನ್ನು ನಾನು ಪಹಣಿ ನೋಡಿಲ್ಲ. ಕೆಂಚಪ್ಪನ ತೆಗೆದುಕೊಂಡಿದ್ದಾನೆ ಅಂತಾ ನಮ್ಮ ಅಪ್ಪ ಹೇಳುತ್ತಿದ್ದ. ಆ ದಾವಾ ಆಸ್ತಿ ಬಸಲಿಂಗಪ್ಪನಿಗೆ ಸೇರಿದ್ದು. ದಾವಾ ಆಸ್ತಿ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನನ್ನ ತಂದೆಯ ಇಂದ ವಿಷಯ ತಳಿದುಕೊಂಡಿದ್ದೇನೆ. ದಾವಾ ಆಸ್ತಿಯ ಪಕ್ಕದಲ್ಲಿ ಕೊಣುಜ್ಞಾರ ದುರ್ಗಪ್ಪನ ಆಸ್ತಿ ನಂತರ ನಮ್ಮ ಆಸ್ತಿ. ದಾವಾ ಆಸ್ತಿ ನಮ್ಮ ಆಸ್ತಿ ಹೊಂದಿಕೊಂಡು ಇಲ್ಲ. ದಾವಾ ಆಸ್ತಿ ಬಗ್ಗೆ ನಮ್ಮ ತಂದೆ ನಾವು ಚಿಕ್ಕವರಿದ್ದಾಗಿನಿಂದ ಹೇಳುತ್ತಿದ್ದರು ಅಂತಾ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರ ನಾನೇ ಬರೆಸಿದ್ದೇನೆ. ಇನ್ನೊಂದು ಸರ್ವೆ ನಂ.24 ಅದು 5 ಎಕರೆ ನನ್ನ ತಾಯಿ ಸಾಬಮ್ಮನ ಹೆಸರಿನಲ್ಲಿದೆ. ಈ ವಿಷಯ ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಇದರ ಪಹಣಿ ಪತ್ರಿಕೆ ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಆಸ್ತಿ ಸರ್ವೆ ನಂ.22 ಅದು 5 ಎಕರೆ 37 ಗುಂಟೆ. ದಾವಾ ಆಸ್ತಿಯ ಪಶ್ಚಿಮಕ್ಕೆ ನಮ್ಮ ಆಸ್ತಿ ಇದೆ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮ್ಮ ಜಮೀನು 18 ಎಕರೆ ಇದ್ದು ಅದು ದಾವಾ ಆಸ್ತಿಯ ದಕ್ಷಿಣಕ್ಕೆ ಇದೆ ಅಂತಾ ಹೇಳಿ ಬರೆಸಿಲ್ಲ. ನನಗೆ ಮನೆತನದ ವ್ಯವಹಾರದ ಬಗ್ಗೆ ಕೇವಲ 8-10 ವರ್ಷದಿಂದ ತಿಳುವಳಿಕೆ ಬಂದಿದೆ ಎಂದರೆ ಸರಿ. ನನ್ನ ಅಣ್ಣಂದಿರು ಮೊದಲು ಒಕ್ಕಲುತನ ಮಾಡುತ್ತಿದ್ದರು ಎಂದರೆ ಸರಿ. ನಾನು ಕುರಿ ಕಾಯುತ್ತಿದ್ದೆ ಅಂತಾ ಸಾಕ್ಷಿ ಹೇಳುತ್ತಾರೆ. ಬಸಲಿಂಗಪ್ಪನನ್ನು ಒಂದು ಸಾರಿ ನೋಡಿದ್ದೇನೆ. ಕೆಂಚಪ್ಪ ದಾವಾ ಆಸ್ತಿಯಲ್ಲಿ ಕೆಲಸ ಮಾಡುವುದನ್ನು ನೋಡಿದ್ದೇನೆ. ಬಸಲಿಂಗಪ್ಪ ಕಡೆಯಿಂದ ಕೆಂಚಪ್ಪ ಯಾವ ರೀತಿ ದಾವಾ ಆಸ್ತಿ ಸಾಗುವಳಿ ಮಾಡುತ್ತಿದ್ದ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಮ್ಮ ತಂದೆಯವರು ಕೆಂಚಪ್ಪ ಖರೀದಿ ಮಾಡಿದ್ದಾನೆ ಅಂತಾ ಹೇಳುತ್ತಿದ್ದರು. ಕೆಂಚಪ್ಪ ದಾವಾ ಆಸ್ತಿ ಖರೀದಿ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ. ನನಗೇ ದಾವಾ ಆಸ್ತಿಯ ಬಗ್ಗೆ ನನ್ನ ತಂದೆಯಿಂದ ತಿಳಿದುಕೊಂಡ ಬಗ್ಗೆ ಮಾತ್ರ ಗೊತ್ತು ಬೇರೆ ಏನು ಗೊತ್ತಿಲ್ಲ ಎಂದರೆ ಸರಿ. ಕೆಂಚಪ್ಪ ಸಾಗುವಳಿ ಮಾಡವುದನ್ನು ನಾನು ಈಗ 8-10 ವರ್ಷಗಳಿಂದ ನೋಡಿದ್ದೇನೆ. ಈ ವಿಷಯವನ್ನು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನಾ ಮಾಹಿತಿ ಇಲ್ಲ. ಠರಾವು ಮಾಡಿಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಕೆಂಚಪ್ಪ

ಬಸಲಿಂಗಪ್ಪನ ಕರೆಯಿಂದ ಖರೀದಿ ಕರಾರು ಪತ್ರ, ಠರಾವು ಮಾಡಿಕೊಂಡ ಅಂತಾ ನಾನು ವಕೀಲರಿಗೆ ಹೇಳಿ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆ ಸಿಲ್ಲ . ಬಸಲಿಂಗಪ್ಪ ಮೃತಪಟ್ಟ ನಂತರ ಆತನ ಹೆಂಡತಿ ಮಕ್ಕಳು ದಾವಾ ಆಸ್ತಿಯನ್ನು ವರ್ಗಾವಣೆ ಮಾಡಿಸಿಕೊಂಡರು ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ಕೆಂಚಪ್ಪ ಬಸಲಿಂಗಪ್ಪನ ಹೆಂಡತಿ ಮಕ್ಕಳಿಗೆ ಆಸ್ತಿ ವರ್ಗಾವಣೆ ಮಾಡಿಸಿಕೊಂಡ ಬಗ್ಗೆ ಮಾಹಿತಿ ಇದೆ. ಯಾಕಂದರೇ ಅದು ನೇರವಾಗಿ ಸರಸ್ವತಮ್ಮ ಹೆಸರಿಗೆ ವರ್ಗಾವಣೆ ಆಗುತ್ತಿರಲಿಲ್ಲ. ಬಸಲಿಂಗಪ್ಪ ಮೃತಪಟ್ಟ ನಂತರ ಆತನ ಹೆಂಡತಿ ನನ್ನ ಹೆಸರಿಗೆ ಆಸ್ತಿ ವರ್ಗಾವಣೆ ಮಾಡಿಸಿಕೊಂಡು ನಂತರ ನಾನು ನಿನಗೆ ವರ್ಗಾವಣೆ ಮಾಡಿಕೊಂಡುತ್ತೇನೆ ಅಂತಾ ಹೇಳಿದನು. ಈ ವಿಷಯವನ್ನುನ 4-5 ವರ್ಷದ ಹಿಂದೆ ತಹಶೀಲ್ದಾರ ಕಚೇರಿಯಲ್ಲಿ ಕೆಂಚಪ್ಪ ಮತ್ತು ಬಸಲಿಂಗಪ್ಪನ ಹೆಂಡತಿ ಮಾತನಾಡಿದರು ಆಗ ನಾನು ಇದ್ದೆ. ಆ ಬಗ್ಗೆ ಕಾಗದ ಪತ್ರ ಮಾಡಿಕೊಡುತ್ತಿದ್ದರು. ನಾನು ಅಂತಹ ಯಾವುದೇ ಕಾಗದ ಪತ್ರ ಕ್ಕೆ ಸಹಿ ಮಾಡಲಿಲ್ಲ. ಕೆಂಚಪ್ಪನಿಗೂ ಮತ್ತು ನನಗೂ 30 ವರ್ಷದ ಪರಿಚಯ. ಕೆಂಚಪ್ಪ ಬಸಲಿಂಗಪ್ಪನಿಗೆ ದಾವಾ ಆಸ್ತಿ ನನ್ನ ಹೆಸರಿಗೆ ಮಾಡಿಕೊಂಡು ಅಂತಾ ಯಾವುದೇ ನೋಟಿಸ್ಸು ಕಳುಹಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ಕೆಂಚಪ್ಪ ಬಸಲಿಂಗಪ್ಪನಿಗೆ ನೇರವಾಗಿ ಹೋಗಿ ದಾವಾ ಆಸ್ತಿ ನನ್ನ ಹೆಸರಿಗೆ ಮಾಡಿಕೊಡು ಅಂತಾ ಕೇಳಿದ ಬಗ್ಗೆ ಮಾಹಿತಿ ಇಲ್ಲ. ಬಸಲಿಂಗಪ್ಪನ ಹೆಂಡತಿ ಮಕ್ಕಳ ಮೇಲೆ ಕೆಂಚಪ್ಪ ಯಾವುದೇ ದಾವೆ ಮಾಡಿದ್ದು ನೋಟಿಸ್ಸು ಕೊಟ್ಟಿದ್ದು ನನಗೆ ಮಾಹಿತಿ ಇಲ್ಲ. ಬಸಲಿಂಗಪ್ಪ ಮೃತಪಟ್ಟ ನಂನತರ ಆತನ ಹೆಂಡತಿ ಮಕ್ಕಳು ಕಾನೂನು ಪ್ರಕಾರ ದಾವಾ ಆಸ್ತಿಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ಬಸಲಿಂಗಪ್ಪನ ಹೆಂಡತಿ ಮಕ್ಕಳು ದಾವಾ ಆಸ್ತಿಯನ್ನು ಕಾನೂನು ಪ್ರಕಾರವೇ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ಕಾನೂನು ಪ್ರಕಾರ ನೊಂದಣಿ ಆಗಿದೆ ಅಂತಾ ನನಗೆ ಗೊತ್ತಿಲ್ಲ. ವಾದಿ ಹೆಸರಿಗೆ ಅದು ಕಾನೂನು ಪ್ರಕಾರ ವರ್ಗಾವಣೆ ಮತ್ತು ಪಹಣಿ ಷತ್ರಿಕೆ ಆಗಿದೆ ಎಂದರೆ ಸರಿ. ವಾದಿ ದಾವಾ ಆಸ್ತಿ ಖರೀದಿ ಮಾಡಿದ ನಂತರ ಆತನೇ ಬಿತ್ತುವುದು, ಬೆಳೆಯುವುದು ಮಾಡುತ್ತಾನೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆಃ ಮರಿಯಪ್ಪನ ಹೊಲ, ಪಶ್ಚಿಮಕ್ಕೆ ದುರ್ಗಪ್ಪ ಹೊಲ, ದಕ್ಷಿಣಕ್ಕೆಃ ಕನಕಪ್ಪನ ಹೊಲ ಮತ್ತು ಉತ್ತರಕ್ಕೆಃ ಅಕ್ಬರನ ಹೊಲ. ಕೆಂಚಪ್ಪ ದಾವಾ ಆಸ್ತಿ ನಾನು ಖರೀದಿಸಿದ್ದೇನೆ ಅಂತಾ ಯಾವತ್ತು ಖರೀದಿ ಪತ್ರ ಮತ್ತು ಇತರೇ ದಾಖಲೆಗಳನ್ನು ತೋರಿಸಿಲ್ಲ. ಕೆಂಚಪ್ಪ ನ್ಯಾಯಾಲಯಕ್ಕೆ ಯಾವ ದಾಖಲೆ ಕೊಟ್ಟಿದ್ದಾನೆ ಗೊತ್ತಿಲ್ಲ. ಬಸಲಿಂಗಪ್ಪ ಮೃತಪ್ಟ ನಂತರ ದಾವಾ ಆಸ್ತಿ ಆತನ ಹೆಂಡತಿಗೆ ವರ್ಗಾವಣೆ ಆಗಿ ಸ್ವಾದೀನದಲ್ಲಿದ್ದಳು ನಂತರ ವಾದಿಗೆ ಹೋಗಿದೆ ಎಂದರೆ ಸರಿ. ಕೆಂಚಪ್ಪ ನಾವು ಆತ್ಮೀಯರಿದ್ದು ಒಬ್ಬರ ಮಾತು ಒಬ್ಬರು ಕೇಳುತ್ತೇವೆ ಎಂದರೆ ಕೇಳುವುದನ್ನು ಕೇಳುತ್ತೇನೆ ಎನ್ನುತ್ತಾರೆ. ಸಾಕ್ಷಿ ಹೇಳಲು ಕೆಂಚಪ್ಪ ನನ್ನು ಕರೆತಂದಿಲ್ಲ. ಸಾಕ್ಷಿ ಹೇಳಲು ನಾನೇ ಸ್ವತಃ ಬಂದಿದ್ದೇನೆ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ
**(ಉಂಡಿ ಮಂಜುಳಾ ಶಿವಪ್ಪ )**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಲಿಂಗಸೂಗುರು.**